Crl.Misc.576/2021

PW–2 (Bandamma)

**<u>ಸಾಕ್ಷಿಯನ್ನು ಇಂದು ದಿನಾಂಕ 08.02.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಆರ್. ಎಮ್. ಎದುರುದಾರರ ಪರ ವಕೀಲರಿಂದ</u>**

ನಾವು ಎದುರುದಾರರಿಗೆ ಮದುವೆಯ ಕಾಲಕ್ಕೆ 3 ತೊಲೆ ಬಂಗಾರ, 50 ಸಾವಿರ ನಗದು ಹಣ ಉಡುಗೋರೆ ನೀಡಿ ಅರ್ಜಿದಾರರ ವಿವಾಹ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರ ನಂ.1 ಇವರ ವಿವಾಹ ಎದುರುದಾರನೊಂದಿಗೆ ದಿನಾಂಕ 19.05.2014 ರಂದು ನೀಲಗಂಗಮ್ಮ ಸಜ್ಜನಶೆಟ್ಟಿ ಕಲ್ಯಾಣ ಮಂಟಪ ಸೇಡಂ ಇಲ್ಲಿ ಆಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳು ಆಶಾಕಾರ್ಯಕರ್ತೆ ಎಂದರೆ ಸರಿ. ಅವರಿಗೆ 15 ಸಾವಿರ ಗೌರವಧನ ಬರುತ್ತದೆ ಎಂದರೆ ಸರಿಯಲ್ಲ. ಅವರಿಗೆ 3 ಸಾವಿರ ಗೌರವಧನ ಬರುತ್ತದೆ. ಎದುರುದಾರನಿಗೆ 25 ಸಾವಿರ ಸಂಬಳ ಬರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೇ 25 ಸಾವಿರ ಸಂಬಳ ಪಡೆಯುತ್ತಿರುವ ಬಗ್ಗೆ ನಾನು ಯಾವುದೇ ದಾಖಲೆ ಈ ಅರ್ಜಿಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ತಾಯಿ ಮಾತ್ರ ಇರುತ್ತಾರೆ ಎಂದರೆ ಸರಿ. ಅವರಿಗೆ ಹೃದಯ ಕಾಯಿಲೆ ಇರುತ್ತದೆ ಎಂದರೆ ಸರಿಯಲ್ಲ. ಎದುರುದಾರ ಹೊಸ ಮನೆಯನ್ನು ಸಾಲ ಮಾಡಿ ಕಟ್ಟಿರುತ್ತಾನೆ ಎಂದರೆ ಸರಿಯಲ್ಲ. ಎದುರುದಾರರ ವಿರುದ್ಧ ನಾವು ಪೊಲೀಸರನ್ನು ಒಟ್ಟುಗೂಡಿಸಿಕೊಂಡು ಸುಳ್ಳು ಕಲಂ 498 ಎ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಅರ್ಜಿದಾರ ನಂ.1 ಇವರು ಸ್ವಂತ ದುಡಿಮೆ ಹೊಂದಿರುತ್ತಾರೆ ಮತ್ತು ಎಲ್ಲ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಎದುರುದಾರರು ಅರ್ಜಿದಾರರಿಗೆ ಜೀವನಾಂಶ ಕೊಡುವ ಬಾಧ್ಯಸ್ತರು ಇರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರ ನಂ.1 ಇವಳ ತಾಯಿ ಇರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾದಂ.ಸೇಡಂ.